ಮೈಸೂರ ಗೆಜೆಟ್ಟ.

ನಂ. 30 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1889.

ಬೆಂಗಳೂರು, ಶನಿವಾರ, ಜುಲೈ ತಾ|| 27, ಸನ್ 1889.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ಆ ಇನಾಂ ಸೂಪರ್‌ಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ಆ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್‌ಆಫಿಸ್ ನೋಟಿಸ್‌ಗಳು.

3ನೇ ಭಾಗ–ಶ್ರೀಮಂ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್‌ಮಾಡಲ್ಪಟ್ಟ ಆಕ್ಟ್ಯುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮಂಮೈಸೂರಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 4ನೇ ಜುಲೈ 1889.

ನಂ. 87.—ಯಿದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,–ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ರವರ ಅಪ್ಪಣೆ ಅನುಸರಿಸಿ ಜಾರೀನಿಸಿ ಮತ್ತೊಂದು ಹುಕುಂ ಕೊಡುವವರಿಗೂ ನ್ಯೆಸೂರು ಸಂಸ್ಥಾನದೊಳಗೆಲ್ಲಾ ತಂಗಡೀಬಳ್ಳಿಯ ಮೇಲಣ ಹಾಸಲು ಭಂಡೀ ಬೋಜೆ 1ಕ್ಕೆ 15 ರೂಪಾಯಿ ವೊಕರರ್‌ಮಾಡಲ್ಪಟ್ಟಿರುತ್ತೆ.

ತಾರೀಖು 12ನೇ ಜುಲೈ 1889.

ನಂ. 97.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿ ವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ವ ಕಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಎಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪೂರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಚಂದದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಪೇರಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡಿಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರವ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ಮಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ಬೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ, ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಪ್ತುಕೂಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮ್ಮಾದ್ಯಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿದಾಗಿ ಪಾವತಿ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಜಿಸ್ಟರ್ ಮಾಡಲ್ಪಟ್ಟು, ಡಿಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ವಗೈರಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪೇಲ್ನಲ್ಲಾಗಲಿ ಅಂದಾಜು ಬೀಜವರೀ ವಿಷಯದಲ್ಲಾಗಲಿ, ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವಿಳೆ ಬಳಪಟ್ಟು ಯಿರುತ್ತೆ.

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರಿ.	ಅಂದಾಜು ಹುಟ್ಟುವಳಿ ಯಾ ಬೇರಿಜ.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕಿಗೋ ಸ್ಥರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾನ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ.	ಮಾಗಡಿ	ಸುಣ್ಣಕಲ್ಲು	ಜೋಡಿ ಕಾಲದೇವನಹಳ್ಳಿ.	ವೆಂಕಟನಾರಾಯಣ ಶಾಸ್ತ್ರಿ ವಗೈರೆ	560 19 0	479 0 0	274 5 1	552 8 2 ಮತ್ತು ಬಡ್ಡಿ	ಮುಂದಿನ ತಿಂಗಳು 21ನೇ ತಾರೀಖಿನಲ್ಲಿ ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ರು ರೂಬರೂ.
	ಮಾಗಡಿ	ಜೆಗ್ಗೇನಹಳ್ಳಿ	ಕಾಯಂಗುತ್ತಾ ಸಾಕಲವಾರ	ವೆಂಕಟಗಿರಿಯಪ್ಪ	0 0 0	266 0 7	282 10 0	91 9 4 ಮತ್ತು ಬಡ್ಡಿ	ಡಿಟೋ 22ರಲ್ಲು ಡಿಟೋ ಡಿಟೋ.
	ಹೊಸಕೋಟೆ	ನಂದಗುಡಿ	ಜೋಡಿ ಅಗ್ರಹಾರ ಮಡ್ಡಹಳ್ಳಿ	ರಾಮಣ್ಣ	15 11 8½	62 0 0	59 14 0	239 8 0 ಮತ್ತು ಬಡ್ಡಿ	ಡಿಟೋ 23ರಲ್ಲು ಡಿಟೋ ಡಿಟೋ.

ಷರಾ.—ಜೋಡೀ ವ ಕಾಯಂಗುತ್ತಾದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿನರುಗಳಿಗೆಹೊಂದಿ ಯಿದ್ದ ವರಿಂದಲಾಗಲಿ, ಉಂಟುಮಾಡಲ್ಪಟ್ಟ ತಮಾಂ ಹಿಡುವಳಿಗಳಿಗೂ, ದೇಣಿಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ವ್ಯವಹಾರ ಸಂಬಂಧಗಳಿಗೂ ಸದರೀ ಹರಾಜು ಮಳಪಟ್ಟಿರುವದಿಲ್ಲ.

ತಾರೀಖು 11ನೇ ಜುಲೈ 1889.

ನಂ. 94.—ಸೊರಬ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಎ. ವೀರರಾಘವಲು ನಾಯಡುಯವರು, 1889ನೇ ಇಸವಿ ಜೂನ್ ತಾರೀಖು 29ನೇ ಪ್ರಾತಃಕಾಲ ಕೆಲಸದಮೇಲೆ ಪುನಶ್ಚ ಬಂದಿರುತ್ತಾರಾಗಿ 1889ನೇ ಇಸವಿ ಏಪ್ರೆಲ್ 25ನೇ ಮತ್ತು ಮಿನ 14ನೇ ನಂಬರುಳ್ಳ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟಿದ್ದ ರಜಾದ ಪೈಕಿ ಅವರು ಉಪಯೋಗಿಸಿಕೊಳ್ಳದೇ ಉಳದಿರುವ 6 ದಿವಸಗಳ ರಜಾ ಇದರಿಂದ ರದ್ದುಪಡಿಸಲ್ಪಟ್ಟಿರುತ್ತದೆ.

ನಂ. 96.—ಹೊಳೇ ನರಸಿಪುರದ ತಾಲ್ಲೂಕು ಅಮಲ್ದಾರ್ ವಿ. ಪಾರ್ಥಸಾರಥಯ್ಯಂಗಾರ್ಯ, 1889ನೇ ಇಸವಿ ಜುಲೈ 1ನೇ ತಾರೀಖಿನ ಪೂರ್ವಾನ್ಹದಲ್ಲಿ ಪುನಶ್ಚ ಕೆಲಸದಮೇಲೆ ಬಂದಿರುತ್ತಾರಾಗಿ 1889ನೇ ಇಸವಿ ಏಪ್ರೆಲ್ 24ನೇ ಮತ್ತು ಮಿನ 20ನೇ ನಂಬರುಳ್ಳ ಇಸ್ತಿಹಾರ್‌ನಾಮೆಯಿಂದ ಕೊಡೋಣಾಗಿದ್ದರಜಾ ಪೈಕಿ ಅವರು ಉಪಯೋಗಿಸಿಕೊಳ್ಳದೇ ಉಳದಿರುವ 13 ದಿವಸಗಳ ರಜಾ ಇದರಿಂದ ರದ್ದುಪಡಿಸಲ್ಪಟ್ಟಿರುತ್ತದೆ.

ತಾರೀಖು 12ನೇ ಜುಲೈ 1889.

ನಂ. 95.—ಕಡೂರು ಡಿಸ್ಟ್ರಿಕ್ಟ್ ಪೊಲೀಸ್ ಆಕ್ಟಿಂಗ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಪಿ. ಆರ್. ಜಬ್ಳಿಯು. ವೆದರಾಲ್‌ಯವರಿಗೆ 1889ನೇ ಇಸವಿ ಜೂನ್ 8ನೇ ಮತ್ತು ಂ 63ನೇ ನಂಬರುಳ್ಳ ಇಸ್ತಿಹಾರಿನಿಂದ ಕೊಡೋಣಾಗಿದ್ದ 15 ದಿವಸಗಳ ಯಗ್ಜಾಮಿನೇಷನ್ ರಜಾ ರದ್ದುಪಡಿಸಲ್ಪಟ್ಟಿರುತ್ತದೆ.

ಕ್ಯಾಂಪ್ ನಂ. 467.—ಆನೇಕಲ್ ತಾಲ್ಲೂಕು ಅಮಲ್ದಾರ್ ಸಯ್ಯದ್ ಅಮೀರ್‌ಹಸ್ರ್ ಯವರಿಗೆ, 1889ನೇ ಇಸವಿ ಜೂನ್ ತಾರೀಖು 20ರ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತದೆ.

ಸಯ್ಯದ್ ಮೀರ್‌ಹಸ್ರ್‌ಯವರು ರಜಾದಮೇಲೆ ಯಿರುವ ಪರ್ಯಂತ ಯಾ ಮತ್ತೊಂದು ಹುಕುಂ ಕೊಡುವ ವರಿಗೂ ದಿವಾಣರವ ರೆವಿನ್ಯೂ ಕೈರ್ಕ್ ಟ. ಬಾವಾರಾವ್ ಬಿ. ಎ. ಯವರು ಆನೇಕಲ್ ತಾಲ್ಲೂಕು ಅಮಲ್ದಾರ್ ವ ಫೈನೇನ್ಷಿಯಲ್ ಸಬ್‌ಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಕೆಲಸನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 453.—ಹಾಸನ ಡಿಪ್ಯುಟಿ ಕಮ್ಮಿಷನರ್ ಮೆ॥ ಪಿ. ಯು. ಪೂರ್ಣಯ್ಯ ಬಿ. ಎ. ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತದೆ.

ಕ್ಯಾಂಪ್ ನಂ. 450.—ಕೋಲಾರ ವ ಮಾಲೂರು ಈ ತಾಲ್ಲೂಕುಗಳ ಪೈಕಿ ಇದರಿಂ ನಮೂದಾಗುವ ಗ್ರಾಮಗಳನ್ನು ಹೊಸ ಕೋಟೆ ತಾಲ್ಲೂಕಿಗೆ ವರ್ಗ ಮಾಡೋಣಾಗಿರುತ್ತದೆ.

ಕೋಲಾರ ತಾಲ್ಲೂಕು ಪೈಕಿ.		ಮಾಲೂರು ತಾಲ್ಲೂಕು ಪೈಕಿ.	
1	ಬಂಡಹಳ್ಳಿ	1	ಅಪ್ಪಸಂದ್ರ ..
2	ವಾರಸಂಡಹಳ್ಳಿ	2	ಲಿಂಗಾಪುರ (ಕಾಯಂಗುತ್ತಾ) ..
3	ಹೆತ್ತಕ್ಕಿ	3	ವಿಜಾಪುರ (ಜೋಡಿ) ..
4	(ಜೋಡಿ) ಆಗಸರಹಳ್ಳಿ ..		

ಕ್ಯಾಂಪ್ ನಂ. 478.—1889ನೇ ಇಸವಿ ಏಪ್ರೆಲ್ 30ನೇ ಮತ್ತು ಮಿನ 27ನೇ ನಂಬರುಳ್ಳ ಇಸ್ತಿಹಾರ್‌ನಾಮೆಯಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್ದಾರ್ ವೈಕಂತಯ್ಯನವರಿಗೆ ಕೊಡೋಣಾಗಿರುವ 20 ದಿವಸದ ಪ್ರಿವಿಲೀಜ್ ರಜಾಕ್ಕೆ ಜಾಸ್ತಿಯಾಗಿ 8 ದಿವಸಗಳ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 480.—1889ನೇ ಇಸವಿ ಮೇ 28ನೇ ಮತ್ತು ಂ 61ನೇ ನಂಬರುಳ್ಳ ಇಸ್ತಿಹಾರಿನಲ್ಲಿ, ತುಮಕೂರು ಡಿಸ್ಟ್ರಿಕ್ಟ್ ಟ್ರೆಜರಿ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಹೆಚ್. ನಂಜುಂಡರಾಜೆ ಅರಸುರವರಿಗೆ ಕೊಡಲ್ಪಟ್ಟಿರುವ ಒಂದು ತಿಂಗಳ ಪ್ರಿವಿಲೀಜ್ ರಜಾಕ್ಕೆ ಜಾಸ್ತಿಯಾಗಿ ಆರುದಿವಸಗಳ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 15ನೇ ಜುಲೈ 1889.

ನಂ. 98.—ತುಮಕೂರು ತಾಲ್ಲೂಕು ಅಮಲ್ದಾರ್ ಹೇಮಾ ಹನುಮಂತಯ್ಯನವರು ತುಮಕೂರ ಡಿಸ್ಟ್ರಿಕ್ಟ್ ಟ್ರೆಜರೀ ಚಾರ್ಜನ್ನು ಮೆ॥ ಹೆಚ್. ನಂಜುಂಡರಾಜೆ ಅರಸುರವರಿಗೆ 1889ನೇ ಇಸವಿ ಜುಲೈ 5ನೇ ತಾರೀಖಿನ ಮಧ್ಯಾನ್ಹದ ವರ ವಹಿಸಿರುತ್ತಾರೆ.

ತಾರೀಖು 17ನೇ ಜುಲೈ 1889.

ನಂ. 99.—ಚಿತ್ರದುರ್ಗ ಡಿಸ್ಟ್ರಿಕ್ಟು ಪೈಕಿ ಮುಸಾಫರ್ ಬಂಗ್ಲೆಗಳ ದರ್ಜೆಯಲ್ಲಿ ಇದರಡಿಕಂಡ ಬದಲಾವಣೆಯು ಮಂಜೂರ್ಮಾ ಡೋಣಾಗಿರುತ್ತದೆ.

ಹೆಸರು	ಯಾವ ಕ್ಲಾಸಿನಿಂದ	ಯಾವ ಕ್ಲಾಸಿಗೆ
1 ದಾವಣಗೆರೆ	IIನೇ ಕ್ಲಾಸಿನಿಂದ	Iನೇ ಕ್ಲಾಸಿಗೆ
2 ಬೊಮ್ಮಗೊಂಡನಕೆರೆ	Iನೇ ಕ್ಲಾಸಿನಿಂದ	IIನೇ ಕ್ಲಾಸಿಗೆ

ತಾರೀಖು 21ನೇ ಡಿಸಂಬರ್ 1888.

ಕಾರ್ಯಾರ್ಥ ದಿವಾನರವರನ್ನು, ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂದಿನ ದಿನ ಚೀಫ್ ಸೆಕ್ರಟೆರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು

2 ಬೆಂಗಳೂರು ಆಫಿಸಿನಲ್ಲಿಯಿಡಲ್ಪಟ್ಟಿರುವ ಅರ್ಜೀಪೆಟ್ಟಿಗೆಯು ದಿನವಹೀ ಚೀಫ್ ಸೆಕ್ರಟೆರಿಯವರಿಂದಲೂ, ಅವರು ಬೆಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಅಂಡರ್ ಸೆಕ್ರಟೆರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಅದರಲ್ಲಿನ ಅರ್ಜಿಗಳು ತೆಗದುಕೊಳ್ಳಲ್ಪಡುವದು.

3. ಅರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಹುಕುಂ ಬಮೋಜೇಬ್,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರಟೆರಿ.

ದಿವಾನರವರು, ಅವರ ಭೇಟಿ ಮಾಡಲಿಚ್ಛೆಯುಳ್ಳ ದೊಡ್ಡ ಮನುಷ್ಯರುಗಳನ್ನು ಪ್ರತಿ ಶನಿವಾರದ ದಿವಸ ಮಧ್ಯಾನ್ಹ 12 ಘಂಟೇ ಲಾಗಾಯತು 2 ಘಂಟೆ ಪರಿಯಂತ ತಮ್ಮ ವಾಸಸ್ಥಾನದಲ್ಲಿ ಬರಮಾಡಿಕೊಳ್ಳುವರು.

ನೇಟಿವ್ ದೊಡ್ಡ ಮನುಷ್ಯರುಗಳು ಅವರಿಗೆ ಯಿಷ್ಟವಿರುವ ಪಕ್ಷಕ್ಕೆ ಅದೇ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಬರಬಹುದು.

ಕೆ. ದೊರಸಾಮಿಅಯ್ಯರ್,
ಪ್ರೈವೆಟ್ ಸೆಕ್ರಟರಿ.

ವಿದ್ಯಾಭ್ಯಾಸದ ಇಲಾಖೆ.

1889ನೇ ಇಸವಿ ಜುಲೈ ತಾರೀಖು 10.

ಮೈಸೂರು ದೇಶೀಯ ಪರೀಕ್ಷೆ.

ಸಂಸ್ಕೃತಕ್ಕಾಗಿ ಪುಸ್ತುಕಗಳ ಬಹುಮಾನ.

ಸ್ರ 1890ನೇ ಇಸವಿ ಫಿಬ್ರುವರೀ ತಿಂಗಳಲ್ಲಿ ನಡೆಯುವ ಮೈಸೂರು ದೇಶೀಯ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಸಂಸ್ಕೃತದಲ್ಲಿ ಅಧಿಕವಾದ ನಂಬರುಗಳನ್ನು ಪಡೆಯುವಂಥಾ ವಿದ್ಯಾರ್ಥಿಗೆ ಗುರುಬುಲ ಪ್ರಜೋದ್ಧಿಕ ಮತ್ತು ಸಿದ್ಧಾಂತ ಕೌಮುದಿ, ಎಂಬ ಈ ಎರಡು ಪುಸ್ತುಕಗಳು, ಬೆಂಗಳೂರು ಸೆಂಟ್ರಲ್ ಕಾಲೀಜ್ ಸಂಸ್ಕೃತ ಪಂಡಿತರಾದ ಮ|| ರಾ|| ವಿಶ್ವೇಶ್ವರ ಶಾಸ್ತ್ರಿಯವರಿಂದ, ಬಹುಮಾನವಾಗಿ ಕೊಡಲ್ಪಡುವವು.

ಸ್ರ 1889ನೇ ಇಸವಿ ಮೇ ತಾರೀಖು 4ರಲ್ಲು 18ನೇ ನಂಬರು ಗೆಜೆಟ್ಟಿನ 82ನೇ ಪುಟದಲ್ಲಿ ಪ್ರಾಯಿಷಾಗಿರುವ ಮೈಸೂರು ದೇಶೀಯ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ತೇರ್ಗಡೆಹೊಂದಲ್ಪಟ್ಟವರ ಪಟ್ಟಿಯಲ್ಲಿ.

ದರ್ಜೆ.	ರಿ|| ನಂ.	ಹೆಸರು.	ಸ್ಕೂಲ್.
16	371	ಎಚ್. ಎ. ಕಂಕರಪ್ಪ,	ಗವರ್ಮೆಂಟ್ ಕನ್ನಡಸ್ಕೂಲ್ ಯಡೆಹಳ್ಳಿ ಕ್ಕೆ ಬದಲಾಗಿ,
16	372	ಎಚ್. ಎ. ಕಂಕರಪ್ಪ	ಗವರ್ಮೆಂಟ್ ಕನ್ನಡಸ್ಕೂಲ್ ಯಡೆಹಳ್ಳಿ ಎಂದು ಓದಿಕೊಳ್ಳತಕ್ಕದ್ದು.

ಸ್ರ 1889ನೇ ಇಸವಿ ಜುಲೈ ತಾರೀಖು 18.

ಸ್ರ 1890ನೇ ಇಸವಿಯಲ್ಲಿ ನಡೆಯುವ ಮೈಸೂರು ದೇಶೀಯ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಹಾಸನ ತಾಲ್ಲೂಕು ಹೆರಗು ಹೋಬಳಿ ಕನ್ನಡ ಸ್ಕೂಲಿನಿಂದ ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗಳಿಗೆ ಇದರಡಿಕಂಡಂತೆ ಬಹುಮಾನಗಳು ಕೊಡಲ್ಪಡುವವು:—

1. ಹಾಸನ ತಾಲ್ಲೂಕು ದುದ್ದದ ಹೋಬಳಿ ಶೇಕದಾರ್ ಮ|| ರಾ|| ಬೇಲೂರು ಕೇಶವಾಚಾರ್ಯರಿಂದ | ಹೆರಗು ಸ್ಕೂಲ್ ವಿದ್ಯಾರ್ಥಿಗಳ ಪೈಕಿ ಯಲ್ಲೂಭಾಗಗಳೂ ಶೇರಿ ಮೊದಲನೇಯವನಾಗಿ ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗೆ—'ಗಣಿತಾರ್ಣವ'